ಎಮ್.ವಿ.ಸಿ.ನಂ.277/2018

ಪಿ.ಡಬ್ಲೂ.2

**<u>ದಿನಾಂಕಃ 27-01-2026 ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಆರ್.ಬಿ.ಡಿ ವಕೀಲರಿಂದ ಃ</u>**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಪಿ.ಡಬ್ಲೂ-2 ಎಂದು ಪರಿಗಣಿಸಲಾಯಿತು.

**<u>ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ ಎನ್.ಎನ್.ಸಿ ವಕೀಲರುಃ</u>**

ಅಪಘಾತವಾದ ದಿನ ನನ್ನ ವಾಹನವನ್ನು ಖಾಸೀಂಸಾಬ ಈತನು ವಾಹನ ಚಾಲಯಿಸುತ್ತಿದ್ದನು. ಅಪಘಾತವಾದ ದಿನ ನಾವು ಸುರಪುರದದಿಂದ ಬಾಚಿಮಟ್ಟಿಗೆ ಹೋಗುತ್ತಿದ್ದೇವು. ಅಪಘಾತವಾದಾಗ ಸಮಯ ಸಂಜೆ 6 ಗಂಟೆ ಆಗಿತ್ತು. ಆ ಸಮಯದಲ್ಲಿ ನಮ್ಮ ವಾಹನ 30 ರಿಂದ 40 ರಲ್ಲಿ ವೇಗವಾಗಿ ಹೋಗುತ್ತಿತ್ತು. ಎದುರುಗಡೆಯಿಂದ ಬರುತ್ತಿದ್ದ ಮೋಟಾರು ಸೈಕಲನ ಚಾಲಕನ ತಪ್ಪಿನಿಂದ ಅಪಪಘಾತವಾಗಿರುತ್ತದೆ ಹೊರತು, ಖಾಸಿಂಸಾಬನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** 3 ನೇ ಎದುರುದಾರರ ಪರ ವಕೀಲರ ಪರವಾಗಿ ಕುಮಾರಿ ವಿ.ಬಿ.ಕೆ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**<u>ಪಾಟೀ ಸವಾಲುಃ</u>** 2 ನೇ ಎದುರುದಾರರ ಪರ ವಕೀಲರ ಪರವಾಗಿ ಶ್ರೀಮತಿ ಜೆ.ಎಲ್.ಎನ್ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಸಮಯವಕಾಶ ನೀಡಲಾಯಿತು.

**<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)</u>**

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.